# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 171 |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸುವ ಹೊಣೆಗಾರಿಕೆ ಯಾರದು; | ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಪ್ರಕಾರ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸುವ ಹೊಣೆಗಾರಿಕೆಯು ಸಂಬಂಧಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಜವಾಬ್ದಾರಿಯಾಗಿರುತ್ತದೆ. |
| ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಯಾವೆಲ್ಲಾ ರಸ್ತೆಗಳಿಗೆ ವ್ಯಾಪ್ತಿಯಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಲಾಗಿದೆ: (ರಸ್ತೆ ಮತ್ತು ಅದರ ಚೈನೇಜ್ ಮಾಹಿತಿಯೊಂದಿಗೆ ವಿವರವನ್ನು ಒದಗಿಸುವುದು): | ಉಡುಪಿ ವಿಭಾಗದ ಹಳೆಯ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 260.31 ಕಿ.ಮೀ ರಸ್ತೆಯಲ್ಲಿ ಒಟ್ಟು 180.35 ಕಿ.ಮೀ. ಉದ್ದದ ರಸ್ತೆಯ ಸರ್ವೆ ಕಾರ್ಯಯನ್ನು 2021-22ನೇ ಸಾಲಿನಲ್ಲಿ ಪೂರ್ಣಗೊಳಿಸಿ ನಕ್ಶೆಯನ್ನು ದೃಢೀಕರಣಕ್ಕಾಗಿ ಕಂದಾಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ ಮತ್ತು 2023-24 ನೇ ಸಾಲಿನಲ್ಲಿ 79.96 ಕಿ.ಮೀ. ಉದ್ದದ ರಸ್ತೆಯ ಸರ್ವೆ ಕಾರ್ಯಯನ್ನು ಪೂರ್ಣಗೊಳಿಸಿ ನಕ್ಷೆಯನ್ನು ದೃಢೀಕರಣಕ್ಕಾಗಿ ಕಂದಾಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ. ಕಂದಾಯ ಇಲಾಖೆಯಿಂದ ನಕ್ಶೆ ದೃಢೀಕರಣ ಬಾಕಿ ಇರುತ್ತದೆ.<br><br>249.40 ಕಿ.ಮೀ. ಉದ್ದದ ಮೇಲ್ದರ್ಜೆಗೇರಿಸಲಾದ ರಾಜ್ಯ ಹೆದ್ದಾರಿ ರಸ್ತೆಗಳಿಗೆ ದಿನಾಂಕ:06.11.2023 ರಂದು ಸೆಕ್ಷನ್ - 3 ಪ್ರಕಾರ ಘೋಷಣೆಯಾಗಿದ್ದು , ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ರಸ್ತೆ ನಿರ್ವಹಣೆಯಡಿ 2025-26ನೇ ಸಾಲಿಗೆ ಲ್ಯಾಂಡ್ ಪ್ಲಾನ್ ಸರ್ವೆಗಾಗಿ ನೀಡಲಾದ ಅನುದಾನದಲ್ಲಿ 123.15 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಯನ್ನು ರೂ.31.48 ಲಕ್ಷ ಅನುದಾನದಲ್ಲಿ ಮತ್ತು 331.03ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯನ್ನು ರೂ.83.36ಲಕ್ಷ ಅನುದಾನದಲ್ಲಿ ಲ್ಯಾಂಡ್ ಪ್ಲಾನ್ ಸರ್ವೆ ಕೈಗೊಳ್ಳಲು ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಹಂತದಲ್ಲಿದೆ. ಉಳಿದ ರಸ್ತೆ ಸರ್ವೆ ಕಾರ್ಯವನ್ನು ಅನುದಾನಕ್ಕನುಗುಣವಾಗಿ ಕ್ರಮಕೈಗೊಳ್ಳಲಾಗುವುದು.<br><br>ಮಂಗಳೂರು ವಿಭಾಗದಲ್ಲಿ ಒಟ್ಟು ರಾಜ್ಯ ಹೆದ್ದಾರಿಯ ಉದ್ದ 424.43 ಕಿ.ಮೀ ಇದ್ದು, ಇದರ ಒಟ್ಟು ಸರ್ವೆ ಕಾರ್ಯ ಪೂರ್ಣಗೊಂಡಿದೆ, ಈ ಹಿಂದೆ ಸರ್ವೆ ಮಾಡಿದ 129.80 ಕಿ.ಮೀ. (2014-15 : 46.40 ಕಿ.ಮೀ; 2016-17: 83.40 ಕಿ.ಮೀ ಒಟ್ಟು 129.80 ಕಿಮೀ) ನಕ್ಷೆಯನ್ನು ದೃಢೀಕರಣಕ್ಕಾಗಿ ಕಂದಾಯ |

| | | |
|---|---|---|
| | | ಇಲಾಖೆಗೆ ಸಲ್ಲಿಸಲಾಗಿರುತ್ತದೆ. 2023-24 ನೇ ಸಾಲಿನಲ್ಲಿ ಸರ್ವೇ ಮಾಡಿದ 294.63 ಕಿ.ಮೀ ದೃಢೀಕರಣಕ್ಕಾಗಿ ಕಂದಾಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ. ಒಟ್ಟು ರಸ್ತೆಯ ದೃಢೀಕರಣಕ್ಕಾಗಿ ಬಾಕಿ ಇದೆ.<br><br>227.86 ಕಿ.ಮೀ. ಉದ್ದದ ಮೇಲ್ದರ್ಜೆಗೇರಿಸಲಾದ ರಾಜ್ಯ ಹೆದ್ದಾರಿ ರಸ್ತೆಗಳಿಗೆ ದಿನಾಂಕ:06.11.2023 ರಂದು ಸೆಕ್ಷನ್ - 3 ಪ್ರಕಾರ ಘೋಷಣೆಯಾಗಿದ್ದು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ರಸ್ತೆ ನಿರ್ವಹಣೆಯಡಿ 2025-26ನೇ ಸಾಲಿಗೆ ಲ್ಯಾಂಡ್ ಪ್ಲಾನ್ ಸರ್ವೆಗಾಗಿ ನೀಡಲಾದ ಅನುದಾನದಲ್ಲಿ 104.46 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಯನ್ನು ರೂ.28.09 ಲಕ್ಷ ಅನುದಾನದಲ್ಲಿ ಮತ್ತು 407.01 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯನ್ನು ರೂ.52.63 ಲಕ್ಷ ಅನುದಾನದಲ್ಲಿ ಲ್ಯಾಂಡ್ ಪ್ಲಾನ್ ಸರ್ವೆ ಕೈಗೊಳ್ಳಲು ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಹಂತದಲ್ಲಿದೆ. ಉಳಿದ ರಸ್ತೆ ಸರ್ವೆ ಕಾರ್ಯವನ್ನು ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು. |
| ಇ) | ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಕಲ್ಲಿನ ಕಂಬಗಳನ್ನು ಅಳವಡಿಸದ ಕಾರಣ ಅನಧಿಕೃತ ಕಟ್ಟಡಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ನಿರ್ಮಾಣವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಕಲ್ಲಿನ ಕಂಬಗಳನ್ನು ಅಳವಡಿಸದೆ ಅಕ್ರಮ ಕಟ್ಟಡಗಳ ನಿರ್ಮಾಣಕ್ಕೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸುವ ಸರ್ವೇ ಕಾರ್ಯವು ಪ್ರಗತಿಯಲ್ಲಿದ್ದು, ಸರ್ವೇ ಕಾರ್ಯ ಮುಗಿದ ನಂತರ ರಸ್ತೆಗಳ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ, ಕಲ್ಲಿನ ಕಂಬಗಳನ್ನು ಅಳವಡಿಸಿದ ನಂತರ ಕಟ್ಟಡ ನಿಯಂತ್ರಣ ರೇಖೆಯಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಿಸಿರುವುದು ಕಂಡುಬಂದರೆ ನಿಯಮಾನುಸಾರ ಅವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಈ) | ಯಾವ ಕಾಲಮಿತಿಯಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಿ ಸ್ಥಳೀಯ ಆಡಳಿತಕ್ಕೆ ವರದಿ ನೀಡಲಾಗುವುದು? | ಸರ್ಕಾರದ ಆದೇಶ ಸಂಖ್ಯೆ: ಲೋಇ 84 ಸಿಆರ್ ಎಂ 2025(ಇ) ದಿನಾಂಕ:17.02.2025 ರಂತೆ ರಸ್ತೆಯ ಭೂಗಡಿ ಕಟ್ಟಡ ರೇಖೆ ನಿಯಂತ್ರಣಾ ರೇಖೆಗಳನ್ನು ಗುರುತಿಸಿಕೊಡಲು ಸಕ್ಷಮ ಪ್ರಾಧಿಕಾರಿ ಕ್ರಮವಹಿಸುತ್ತಾರೆ. |

ಲೋಇ 4 ಸಿಕ್ಯೂಎನ್ 2026(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು